ಆದರೆ ಅವಳು ಟ್ರಿಪ್ಪಿಗೆ ಹೋಗೇ ಇರಲಿಲ್ಲ ಅಂತ ಗೊತ್ತಾದಾಗ ಎದೆಯೊಡೆದುಕೊಂಡರು. ಕಂಪ್ಲೈಂಟು ಕೊಟ್ಟರೂ ಅವಳು ಎಲ್ಲೂ ಪತ್ತೆಯಾಗಲಿಲ್ಲ.

ಶಾರದಾ ಟೀಚರಿಗೆ ಪುತಲಿಬಾಯಿ ಹೈಸ್ಕೂಲಿನಲ್ಲಿ ಕೆಲಸ ಸಿಕ್ಕಿತು. ಅಂಗಡಿಮನೆ ಬಿಟ್ಟು, ಅದೇ ಬಿಲ್ಡಿಂಗಿನಲ್ಲೇ ಸಿಂಗಲ್ ಬೆಡ್ ರೂಮಿನ ಬಾಡಿಗೆಮನೆ ಮಾಡಿಕೊಂಡು ಹೋದರು. ಅವರ ಸ್ಥಿತಿಯೇನೋ ಸುಧಾರಿಸಿತು ಅಂದುಕೊಂಡರೆ ಆರೇಳು ತಿಂಗಳಿಗೇ ಅವರ ಮನೆ ಮುಂದೆ ಜಗಳ. ಅವರಪ್ಪನ ಕಪಕಪಾಳಕ್ಕೆ ಹೊಡೀತಿದ್ದಾರೆ ಅವರಮ್ಮ! ಪುತಲಿಬಾಯಿ ಹೈಸ್ಕೂಲಿನ ಪಕ್ಕದ ಅಂಗಡಿಯಲ್ಲಿ ಶಾರದಾ ಟೀಚರಿನ ಹೆಸರು ಬರೆಸಿ, ಒಂಬತ್ತು ಸಾವಿರದವರೆಗೆ ಸಾಲ ಮಾಡಿದ್ದನಂತೆ ಅವನು. ಎಷ್ಟು ಕತ್ತಿನಪಟ್ಟಿ ಹಿಡಿದು ಜಗ್ಗಿದರೇನು? ಅವರಪ್ಪನಿಂದ ಐದು ಬಿಡಿಗಾಸನ್ನಾದರೂ ವಸೂಲು ಮಾಡಲು ಆದೀತೇ? ಪಾಪ... ಶಾರದಾ ಟೀಚರ್ ಹೆಗಲ ಮೇಲೇ ಎಲ್ಲ ಹೊರೆಯೂ ಬಿತ್ತು. ಅವರಿಗೇನು ತಮ್ಮದೇ ಆದ ಬದುಕು ಅಂತ ಇರಲಿಲ್ಲವೇ... ಅಂದರೆ ಇತ್ತು. ಆಗೀಗ ಶಾಲೆಯ ಡ್ರಿಲ್ ಮಾಸ್ಟರ್ ಪರಮೇಶ್ವರಪ್ಪನವರ ಜೊತೆ ಪಾರ್ಕು, ಬಸ್ ಸ್ಟಾಪು, ಹೋಟೆಲುಗಳಲ್ಲಿ ಕಾಣಿಸಿಕೊಂಡಿದ್ದರು. ಪರಮೇಶ್ವರಪ್ಪನವರೂ ಶಾರದಾ ಟೀಚರಿನ ಮನೆ ಕಷ್ಟಸುಖ ಅರ್ಥ ಮಾಡಿಕೊಂಡು ಅವರಿಗೆ ಒತ್ತಾಸೆಯಾಗಿದ್ದರೆಂದು ತೋರುತ್ತದೆ. ಕೆಲವೊಮ್ಮೆ ಮನೆಗೂ ಬಂದು ಹೋಗುತ್ತಿದ್ದರು. ತಾಯಿ ಸುನಂದಮ್ಮರ ತರಕಾರಿ ಬುಟ್ಟಿ ಹಿಡಿದು ಜೊತೆಯಲ್ಲಿ ನಡೆಯುತ್ತಿದ್ದರು.

ಇನ್ನು ಶಾರದಾ ಟೀಚರ್‌ನ ತಮ್ಮ ಕಿಟ್ಟಿ ಎಂಟನೇ ಕ್ಲಾಸಿಗೇ ಸ್ಕೂಲು ಬಿಟ್ಟು ಬೀದಿ ತಿರುಗುತ್ತಿದ್ದ. ಚೈನ್ ಸ್ಮೋಕರ್... ಆಗೀಗ ಕುಡಿಯುವುದೂ, ಅಕ್ಕನ ಪರ್ಸಿನಲ್ಲಿ ಹಣ ಕದಿಯುವುದೂ ಇತ್ತು. ಒಂದು ಸಲ ಅಕ್ಕನ ಕಳೆದಿಟ್ಟ ಬಳೆ ಕದ್ದನೆಂದು ಸುನಂದಮ್ಮನವರು ಮೂಲೆಯಲ್ಲಿದ್ದ ಕಸದ ಪೊರಕೆ ತೆಗೆದುಕೊಂಡು ಚೆನ್ನಾಗಿ ಹೊಡೆದಿದ್ದರಂತೆ. ಅದಾದ ಮಾರನೇ ದಿನ ಅವನು ಮನೆಗೆ ಬರಲಿಲ್ಲ. ಎಲ್ಲೋ ಮುನಿಸಿಕೊಂಡು ಹೋಗಿರಬೇಕು, ನಾಳೆಗೆ ಬಂದುಬಿಡುತ್ತಾನೆ ಎಂದುಕೊಂಡಿದ್ದರಂತೆ ಅಮ್ಮ ಮಗಳು. ಆದರೆ ಅವನು ಮೂರು ದಿನವಾದರೂ ಬರಲಿಲ್ಲ. ಪೊಲೀಸ್ ಸ್ಟೇಷನಿಗೆ ಕಂಪ್ಲೈಂಟು ಕೊಡಲು ಹೋದರೆ ಅವನಾಗಲೇ



ಲಾಕಪ್ಪಿನಲ್ಲಿ ಇದ್ದಾನೆ! ಹುಡುಗರ ಜೊತೆ ಸೇರಿಕೊಂಡು ಬಸ್ಸಿಗೆ ಕಲ್ಲು ತೂರಿ ಗಾಜುಗಳನ್ನು ಒಡೆದ ಅಂತ... ಪರಮೇಶ್ವರಪ್ಪನವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಪೊಲೀಸರ ಕೈ ಬೆಚ್ಚಗೆ ಮಾಡಿ, ತಮ್ಮನನ್ನು ಬಿಡಿಸಿಕೊಂಡು ಬಂದರು. ಒಮ್ಮೆ ಹೋಗಿ ಬಂದನಲ್ಲವೇ ಪೊಲೀಸ್ ಸ್ಟೇಷನ್ನಿಗೆ? ಮುಂದೆ ಅದು ಅವನಿಗೆ ಎಚ್ಚರಿಕೆಯಾಗಲಿಲ್ಲ; ಬದಲಿಗೆ ರೂಢಿಯಾಯಿತು.

ಪರಮೇಶ್ವರಪ್ಪನವರು ತಮ್ಮ ಮನೆಗೆ ಒಂದೆರಡು ಸಲ ಶಾರದಾ ಟೀಚರನ್ನ ಕರೆದುಕೊಂಡು ಹೋಗಿದ್ದರು. ಅವರ ಅಪ್ಪ, ಅಮ್ಮ, ಅಣ್ಣ, ಅತ್ತಿಗೆಯರ ಮನ ಗೆದ್ದಿದ್ದರಂತೆ ಶಾರದಾ ಟೀಚರ್. ಅವರೆಲ್ಲ ಮಾತಾಡಿಕೊಂಡು ಒಮ್ಮೆ ಇವರ ಮನೆಗೆ ಹೆಣ್ಣು ಕೇಳಲು ಬರಲು ಆಲೋಚಿಸಿದ್ದರಂತೆ. ನಾಳೆ ಹೋಗೋಣ ಅಂದುಕೊಂಡು ಕೂತಿರುವ ಹೊತ್ತಿನಲ್ಲಿ, ಈ ನತದೃಷ್ಟ ಟೀಚರ್‌ನ ಕಿರಾತಕ ತಂದೆ ಅವರ ಮನೆಗೆ ಹೋಗಿ ಶಾರದಾ ಟೀಚರ್‌ನ ಮನೆಯ ಪ್ರತಿಯೊಂದು ವಿಚಾರವನ್ನೂ ಎಳೆಎಳೆಯಾಗಿ ಬಿಡಿಸಿ ಹೇಳಿ, ಅವರೆಲ್ಲರ ಮನಸ್ಸಿನಲ್ಲಿ ಕಹಿಭಾವನೆ ಉಂಟುಮಾಡಿದರು. ಅವರು ಈ ಸಂಬಂಧ ಬೇಡ ಎಂದುಬಿಟ್ಟರು. ಪರಮೇಶ್ವರಪ್ಪನವರು ಏನು ಮಾಡಿದರೂ ಮನೆಯವರ ಮನಸ್ಸು ಬದಲಿಸಲು ಆಗಲಿಲ್ಲ. ಶಾರದಾ ಟೀಚರ್ ರಸ್ತೆಯಲ್ಲೆಲ್ಲೋ ತನ್ನಪ್ಪನನ್ನು ಕಂಡು ಹಿಡಿದು ನಿಲ್ಲಿಸಿ ಯಾಕೆ ಹೀಗೆ ಮಾಡಿದೆಯೆಂದು ಕೇಳಿದರೆ, 'ಏನೋ ನಿನ್ನ ಹೆಸರು